ಇದಕ್ಕಾಗಿ ಹಲವಾರು ಮಾಹಿತಿಗಳನ್ನು ರಾಜ್ಯ ಸರ್ಕಾರದಿಂದ ನಿಗದಿತ ನಮೂನೆಯಲ್ಲಿ ಕೋರಿದ್ದು ಈ ಮಾಹಿತಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸಂಗ್ರಹಿಸಲಾಗುತ್ತಿದ್ದು, ಇವುಗಳು ಬಂದ ನಂತರ ಕ್ರೋಢೀಕರಿಸಿ ಮುಂದಿನ ಕ್ರಮಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು. ಇಷ್ಟೇ ಹೊರತು ಅಲೆಮಾರಿ ಜನಾಂಗವನ್ನು ಗುರುತಿಸುವಲ್ಲಿ ಯಾವುದೇ ಮಾರ್ಗಸೂಚಿಯನ್ನು ನೀಡಿರುವುದಿಲ್ಲ.

ಆ ಪ್ರಶ್ನೆ 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ ಪ್ರಸ್ತುತ ರಾಜ್ಯದಲ್ಲಿರುವ ಮೀಸಲಾತಿ ನಿಯಮಾವಳಿಗಳ ಮೇರೆಗೆ ಅಲೆಮಾರಿ ಜನಾಂಗಗಳು 'ಎ' ಗುಂಪಿನಡಿಯಲ್ಲಿ ಬರುವುದರಿಂದ ಪ್ರತ್ಯೇಕ ಪಟ್ಟಿಯನ್ನು ಪ್ರಕಟಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಕೇಂದ್ರ ಸರ್ಕಾರದವರು ಕೇಳಿರುವ ಮಾಹಿತಿಗಳನ್ನು ರಾಜ್ಯದ ಎಲ್ಲಾ ವಿಭಾಗಾಧಿಕಾರಿಗಳಿಂದ ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯದರ್ಶಿಗಳಿಂದ ಹಾಗೂ ಜಿಲ್ಲಾ ಅಧಿಕಾರಿಗಳಿಂದ ಕೋರಲಾಗಿದ್ದು ಅವುಗಳು ಬಂದ ನಂತರ ತ್ವರಿತದಲ್ಲಿ ಕ್ರೋಡಿಕರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು.

ಉ ಪ್ರಶ್ನೆ 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಊ ಪ್ರಶ್ನೆ 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ:- ಕೊಡಗು ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 464 (593)

ಶ್ರೀಮತಿ ಸುಮಾ ವಸಂತ (ವಿರಾಜಪೇಟೆ):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ ಕೊಡಗು ಜಿಲ್ಲೆಯಲ್ಲಿ ಸ್ವಯಂ ಉದ್ಯೋಗದ ಯೋಜನೆಯಡಿಯಲ್ಲಿ ಪ್ರತಿ ವರ್ಷ ಎಷ್ಟು ಜನ ಯುವಕರಿಗೆ ಉದ್ಯೋಗ ಒದಗಿಸಲಾಗಿದೆ? (1989ರಿಂದ 1992ರವರೆಗೆ ತಾಲ್ಲೂಕುವಾರು, ವರ್ಷವಾರು ವಿವರ ನೀಡುವುದು).

ಆ ಈ ಯೋಜನೆಯಲ್ಲಿ ಪ್ರತಿ ವರ್ಷ ಬಿಡುಗಡೆ ಆಗಿರುವ ಹಣ ಎಷ್ಟು?

ಇ ಸ್ವಯಂ ಉದ್ಯೋಗಾರ್ಥಿಗಳಿಗೆ ಈ ಯೋಜನೆಯ ಫಲ ದೊರಕಲು ಆಯ್ಕೆ ಸಮಿತಿಗಳಲ್ಲಿ ಅಧಿಕಾರೇತರರಿಗೆ ಅವಕಾಶ ಇದೆಯೇ?

ಈ ಈ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗಿಗಳಾಗಿರುವವರ ಸಂಖ್ಯೆ ಎಷ್ಟು?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ ಭಾರತ ಸರ್ಕಾರದವರು 1983-84ರಿಂದ ವಿದ್ಯಾವಂತ ನಿರುದ್ಯೋಗಿಗಳ ಸ್ವಯಂ ಉದ್ಯೋಗ ಯೋಜನೆಯನ್ನು ಚಾಲಿಗೆ ತಂದಿದ್ದು, ಇಲ್ಲಿಂದ ಪ್ರತಿ ವರ್ಷ ಕೊಡಗು ಜಿಲ್ಲೆಯಲ್ಲಿ ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸಿರುವ ಬಗ್ಗೆ ಮಾಹಿತಿ ಈ ಕೆಳಕಂಡಂತಿದೆ.

ವರ್ಷ	ಉದ್ಯೋಗದ ಸಂಖ್ಯೆ
1983-84	140
1984-85	247
1985-86	248
1986-87	192
1987-88	118
1988-89	162

1989-90	94
1990-91	71
ಒಟ್ಟು	1272

ತಾಲ್ಲೂಕಿನ ಹೆಸರು	ವರ್ಷ 1989-90		1990-91		1991-92	
	ಫಲಾನುಭವಿಗಳ ಸಂಖ್ಯೆ ಮತ್ತು ಮಂಜೂರಾಗಿರುವ ಹಣ		ಫಲಾನುಭವಿಗಳ ಸಂಖ್ಯೆ ಮತ್ತು ಮಂಜೂರಾಗಿರುವ ಹಣ		ಫಲಾನುಭವಿಗಳ ಸಂಖ್ಯೆ ಮತ್ತುಮಂಜೂರಾಗಿರುವ ಹಣ	
	ಸಂಖ್ಯೆ	ಹಣ	ಸಂಖ್ಯೆ	ಹಣ	ಸಂಖ್ಯೆ	ಹಣ
					(ಫೆಬ್ರವರಿ ಅಂತ್ಯದವರೆಗೆ)	
1.ಮಡಿಕೇರಿ	27	4.88	26	5.04	15	2.35
2.ಸೋಮವಾರ ಪೇಟೆ	22	3.98	25	4.17	17	2.55
3.ವಿರಾಜಪೇಟೆ	45	7.15	20	3.65	12	2.60

ಆ ಈ ಯೋಜನೆಯಲ್ಲಿ ಪ್ರತಿವರ್ಷ ಬಿಡುಗಡೆಯಾಗಿರುವ ಸಾಲದ ಹಣದ ವಿವರ ಈ ಕೆಳಕಂಡಂತಿದೆ.

ವರ್ಷ	ಹಣದ ಮೊತ್ತ (ಲಕ್ಷಗಳಲ್ಲಿ)
1983-84	33.00
1984-85	63.85
1985-86	53.50
1986-87	36.00
1987-88	23.36
1988-89	23.25
1989-90	16.01
1990-91	12.86
ಒಟ್ಟು	261.83

ಇ ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಕಾರ್ಯಸೂಚಿಯಂತೆ ಅಧಿಕಾರೇತರರಿಗೆ ಆಯ್ಕೆ ಸಮಿತಿಯಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

ಈ ಈ ಯೋಜನೆಯು ಪ್ರಾರಂಭವಾದಂದಿನಿಂದ 1990-91ರವರೆಗೆ 1272 ಫಲಾನುಭವಿಗಳು ಸ್ವ ಉದ್ಯೋಗಿಗಳಾಗಿದ್ದಾರೆ.

ವಿಷಯ :- ಸಾರ್ವಜನಿಕ ಉದ್ದಿಮೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 468 (1081)

ಶ್ರಿ ಹೆಚ್.ವೈ.ಮೇಟಿ. (ಗಳೇದಗುಡ್ಡ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ ರಾಜ್ಯದಲ್ಲಿ ಇದುವರೆವಿಗೂ ಸಾರ್ವಜನಿಕ ಉದ್ಯಮಗಳಲ್ಲಿ ನಷ್ಟ ಅನುಭವಿಸುತ್ತಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವುವು?

ಆ ಸರ್ಕಾರವು ಈ ನಷ್ಟದಲ್ಲಿರುವ ಕೈಗಾರಿಕೆಗಳನ್ನು ಖಾಸಗಿಯವರಿಗೆ ವಹಿಸಿದೆಯೇ ?

ಇ ವಹಿಸಿದ್ದಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಹಸ್ತಾಂತರ ಮಾಡಲಾಗಿದೆ.?(ವಿವರ ನೀಡುವುದು)

ಶ್ರಿಮತಿ ಮನೋರಮ ಮಧ್ವರಾಜ್(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ ನಷ್ಟ ಅನುಭವಿಸುತ್ತಿರುವ ಕೈಗಾರಿಕೆಗಳ ಸಂಖ್ಯೆ : 7 (1989-90 ರವರೆಗೆ)ಪಟ್ಟಿಯನ್ನು ಲಗತ್ತಿಸಿದೆ.

ಆ ಇಲ್ಲ.

ಇ ಪ್ರಶ್ನೆ (ಅ)ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

STATEMENT SHOWING THE NAME OF LOSS MAKING INDUSTRIES COMING UNDER THE ADMINISTRATIVE CONTROL OF COMMERCE & INDUSTRIES DEPARTMENT

---

1. Karnataka Soaps and Detergents Limited.
2. Karnataka Silk Industries Corporation Limited.
3. Karnataka Implements and Machineries Company Ltd.
4. Mysore Electrical Industries Limited.
5. Mysore Chrome Tanning Company Limited.
6. Chamundi Machine Tools Limited.
7. Mysore Cosmetics Limited.

ವಿಷಯ :- ಬೈಲಹೊಂಗಲ ತಾಲ್ಲೂಕು ವಣ್ಣೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 470 (2336)

ಶ್ರಿ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ವಣ್ಣೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಬೇಕೆಂದು ಮನವಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಹಾಗಿದ್ದಲ್ಲಿ ಸರ್ಕಾರದವರು ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲು ಯಾವ